ಕೂಡ ಒಳ್ಳೆಯ ಗೆಳೆಯರಾಗಿದ್ದಾರೆ. ಪ್ರತಿ ದಿನ ಜೊತೆಲಿ ವಾಕಿಂಗ್ ಹೋಗ್ತೀವಿ.'

'ಹಾಗಿದ್ಮೇಲೆ ಇಷ್ಟೆಲ್ಲ ಒಳ್ಳೆ ಸಂಬಂಧ ಇರೋ ನಿಮ್ಮ ಗೆಳೆಯನನ್ನ ನೀವು ಕೊಂದಿದ್ದಾರೂ ಯಾಕೆ?' ಇನ್ಸ್‌ಪೆಕ್ಟರ್ ಕೂಡ ಒಂದು ಕ್ಷಣ ಬಹುತೇಕ ಆ ಮಾನಸಿಕ ಕೊಲೆಯನ್ನು ಸಂಪೂರ್ಣ ನಂಬಿದವರಂತೆ ಕೇಳಿದರು.

'ಇಬ್ಬರೂ ಅಕ್ಕ ಪಕ್ಕ ಸೈಟ್ ತಗೊಂಡ್ವಿ, ಮನೆ ಕಟ್ಟಿದ್ವಿ. ತೋಟ ಮಾಡಬೇಕು ಅನ್ನಿಸಿ ಒಂದೇ ಹತ್ರ ತೋಟ ತಗೊಂಡ್ವಿ. ಇಬ್ಬರ ಮಕ್ಕಳ ಓದು ಆಲ್‌ಮೋಸ್ಟ್ ಮುಗಿತಾ ಬಂತು. ನಮ್ಮ ನಡುವೆ ಅಂತಸ್ತಿನ ಯಾವ ವ್ಯತ್ಯಾಸವೂ ಇರಲಿಲ್ಲ. ಆದರೆ ಕಳೆದ ವಾರ ಕಾರ್ ತಗೊಳ್ಳೋ ಸಂಬಂಧವಾಗಿ ನಾವಿಬ್ಬರೂ ಸಹಮತಕ್ಕೆ ಬಂದ ಕಾರಿನ ವಿಷಯದಲ್ಲಿ ನಮ್ಮಿಬ್ಬರ ಮಕ್ಕಳು ಏನು ಮಾಡಿದರೂ ಒಪ್ಪಲಿಲ್ಲ. ಅವರ ಅಭಿರುಚಿಗಳೇ ಬೇರೆ ಆಗಿದ್ದವು. ಅವನು ಬರೋಬ್ಬರಿ ಇಪ್ಪತ್ತೆಂಟು ಲಕ್ಷದ ಕಾರು ತಗೊಂಡ. ನನ್ನದು ಬರೀ ಹನ್ನೆರಡೂವರೆ ಲಕ್ಷದ್ದು'.

'ನಿಮಗಿಂತ ದೊಡ್ಡ ಬ್ರಾಂಡಿನ ಕಾರು ತೆಗೆದುಕೊಂಡ ಅಂತ ಗೆಳೆಯನನ್ನ ಕೊಲ್ಲಬೇಕು ಅಂತನ್ನಿಸಿಬಿಡ್ತಾ ನಿಮಗೆ?'

'ಛೇ, ಇಲ್ಲ ಸರ್. ಅದು ನಮ್ಮ ಮಕ್ಕಳ ಅಭಿರುಚಿ. ಹಾಗೆ ನೋಡಿದರೆ ಶಾಲಾ ಶಿಕ್ಷಕನಾಗಿರುವ ಅವನಿಗಿಂತ, ಸಣ್ಣ ಪುಟ್ಟ ಕೈಕಾಸಿಗೆ ಅವಕಾಶ ಇರೋ ನನ್ನ ಬಳಿಯೇ ಹೆಚ್ಚು ದುಡ್ಡು ಇದೆ. ಆದರೆ ಅದು ನಮ್ಮ ನಡುವೆ ಎಂದೂ ಅಡ್ಡಿಯಾಗಿಲ್ಲ ಸರ್. ಬಾಲ್ಯದ ಗೆಳೆಯರ ಮಧ್ಯೆ ಅಂತಸ್ತು ಸುಲಭವಾಗಿ ಅಡ್ಡಿಯಾಗಲಾರದು.'

'ಮತ್ಯಾವುದು ಸರ್ ಅಡ್ಡಿಯಾದದ್ದು?' ಇನ್ಸ್‌ಪೆಕ್ಟರ್‌ಗೆ ಈ ಶರಣಾಗತನ ಮೇಲೆ ಗೌರವ ಮೂಡಲಾರಂಭಿಸಿತ್ತು. ಅದು ಅವರ ಮಾತಿನ ಶೈಲಿ ಮತ್ತು ಧ್ವನಿಯಲ್ಲಿ ವ್ಯಕ್ತವಾಯಿತಷ್ಟೆ. ನಿವೃತ್ತಿಯ ದಿನಗಳು ಹತ್ತಿರ ಬಂದವು. ಒಮ್ಮೆ ಪೂರ್ತಿ ಬಾಡಿ ಹೆಲ್ತ್ ಚೆಕಪ್ ಮಾಡ್ಸಿ ಬಿಡೋಣ ಅಂತ ಇಬ್ಬರೂ ಆಸ್ಪತ್ರೆಗೆ ಹೋಗಿದ್ವಿ ಸರ್. ಮರುದಿನ ಇಬ್ಬರೂ ರಿಪೋರ್ಟ್ ತಗೊಂಡ್ ಬರೋಕೆ ಅಂತ ಹೋದ್ವಿ. ಕನ್ನಡ ಮೇಷ್ಟ್ರು ಆರೋಗ್ಯ ಎಷ್ಟು ಕರಾರುವಕ್ಕಾಗಿತ್ತು ಅಂತೀರ ಎಲ್ಲಾ ನೆಗೆಟಿವ್ ಇದ್ವು. ಯಾವುದೊಂದೂ ಪಾಸಿಟಿವ್ ಇರ್ಲಿಲ್ಲ. ಅದ್ನ ಎಲ್ರ ಹತ್ರ ಹೆಮ್ಮೆಯಿಂದ ಹೇಳಿಕೊಂಡು ತಿರುಗಾಡಿದ ಅವನು. ಆದ್ರೆ ನನಗೆ ಶುಗರ್ ಮತ್ತೆ ಬಿ.ಪಿ. ಎರಡೂ ಇರೋದು ಪತ್ತೆ ಆಯ್ತು ಸರ್. ಸೋಡಿಯಮ್, ಪೊಟಾಶಿಯಮ್ ಕೂಡ ಸರಿಯಾದ ಪ್ರಮಾಣದಲ್ಲಿರಲಿಲ್ಲ. ಕೊಲೆಸ್ಟ್ರಾಲ್ ಕೂಡ ಜಾಸ್ತಿ ಇತ್ತು. ಇಬ್ಬರನ್ನೂ ಪರ್ಸನಲ್ ಆಗಿ ಕರೆದು ರಿಪೋರ್ಟ್ ಕೊಟ್ಟು, ಡಾಕ್ಟರ್ ಮಾತಾಡಿ ಕಳಿಸಿದ್ರು. ಹಾಗಾಗಿ ಇಬ್ಬರೂ ಎಲ್ಲಾ ನಾರ್ಮಲ್ ಇದೆ ಅಂತ ಮಾತಾಡಿಕೊಂಡು ಅಲ್ಲೇ ಎದುರಿಗಿದ್ದ ಹೋಟೆಲ್‌ನಲ್ಲಿ ಕಾಫಿ ಕುಡುದ್ವಿ. ಆದರೆ ನಾನು ಶುಗರ್‌ಲೆಸ್ ಕಾಫಿ ಹೇಳೋಕೆ ಮನಸ್ಸಾಗಲಿಲ್ಲ ಸರ್. ಮನೆಗೆ ಬಂದ ಮೇಲೆ ರಾತ್ರಿಯಿಡೀ ನಿದ್ದೆ ಬರ್ಲಿಲ್ಲ. ಮಾರ್ನಿಂಗ್ ವಾಕ್ ಹೋದಾಗ ಯಾವತ್ತೂ ಅನ್ನಿಸದ ಒಂದು ಯೋಚನೆ ಬಂತು. ಈ ಪುಣ್ಯವಂತ ಆರೋಗ್ಯದಿಂದ ಇದಾನೆ. ನನಗಿಂತ ಹೆಚ್ಚು ವರ್ಷ ಬದುಕಬಹುದು. ಹೇಗಾದ್ರೂ ಆಗಿ ನನಗಿಂತ ಮೊದಲೇ ಇವನು ಸಾಯಲಿ ಅಂತ ಅನ್ನಿಸಿಬಿಡ್ತು. ಆಗ ಅವನ ಮುಖ ನೋಡಿದೆ. ಬಾರೋ ಕಾಫಿ ಕುಡಿಯೋಣ ಅಂದ. ಅದೇನಾಗಿತ್ತೋ ನನಗೆ ಅದರ ಬದ್ಲು ವಿಷ ಕುಡಿ ಎಂದೆ'.

'ಆಮೇಲೆ?'

'ಅಷ್ಟೇ ಸರ್. ಇಬ್ಬರೂ ಅದನ್ನೊಂದು ತಮಾಷೆ ಎಂಬಂತೆ ನಕ್ಕು ವಾಕಿಂಗ್ ಮುಗಿಸಿ ಮನೆಗೆ ಹೋದ್ವಿ.'

'ಮತ್ತೆ ನೀವು ಅವರನ್ನು ಕೊಂದದ್ದು ಯಾವಾಗ? ಎಲ್ಲಿ?'

'ನನಗಿಂತ ಅವನು ಬೇಗ ಸಾಯಲಿ ಎಂದುಕೊಂಡೆನಲ್ಲ ಆಗಲೇ ಸರ್. ಎಲ್ಲಿ ಎಂದರೆ ನನ್ನ ಮನಸ್ಸಿನಲ್ಲಿ'.

'ಹಾಗಾದರೆ ಪೊಲೀಸ್ ಸ್ಟೇಷನ್‌ಗೆ ಬಂದದ್ದು ಏಕೆ?' ಇನ್ಸ್‌ಪೆಕ್ಟರ್ ಕೂಡ ಭಾವನಾತ್ಮಕವಾಗಿಯೇ ಕೇಳಿದರು.

'ಮಾನಸಿಕವಾಗಿ ಒಂದು ಜೀವ ಸಾಯಲಿ ಎಂದು ಬಯಸುವುದು ಕೊಲೆಗೆ ಸಮಾನ ಆಗುವುದಿಲ್ಲವೆ ಸರ್?'

'ಮನುಷ್ಯರು ಇನ್ನೂ ಅಷ್ಟು ವಿಕಾಸ ಹೊಂದಿಲ್ಲ ಸರ್'

'ಹಾಗಾದರೆ ನನಗೀಗ ನೀವು




ಶಿಕ್ಷೆ ಕೊಡಲಾಗುವುದಿಲ್ಲವೆ?'

'ಇಲ್ಲ ಸರ್. ಇದಕ್ಕೆ ಯಾವ ಸೆಕ್ಷನ್‌ಗಳನ್ನೂ ಹಾಕಲು ಬರುವುದಿಲ್ಲ ಹಾಗೂ ನನಗೆ ಈ ವಿಷಯದಲ್ಲಿ ತರಬೇತಿಯೂ ಆಗಿಲ್ಲ.'

'ಹಾಗಾದರೆ ನಾನು ಮನೆಗೆ ಹಿಂತಿರುಗಬಹುದೆ?'

'ಹೌದು... ಬೇಕಾದರೆ ನಾನೇ ಡ್ರಾಪ್ ಮಾಡ್ತೀನಿ ಸರ್'.

'ಬೇಡ, ಆದರೆ ಕೊನೆಯದಾಗಿ ಒಂದು ಪ್ರಶ್ನೆ ಕೇಳಬಹುದೆ?'

'ಕೇಳಿ ಸರ್'.

'ಜಗತ್ತಿನಲ್ಲಿ ನಡೆಯುವ ಇಂಥ ಅಸಂಖ್ಯಾತ ಅಪರಾಧಗಳಿಗೆ ಶಿಕ್ಷೆ ಇಲ್ಲವೆ?'

'ಮನುಷ್ಯರು ಇನ್ನೂ ಅಷ್ಟು ವಿಕಾಸ ಹೊಂದಿಲ್ಲ ಸರ್'.

'ಅಂತೂ ಮನೋಲೋಕದಲ್ಲಿ ಎಸಗುವ ಅಪರಾಧಕ್ಕೆ ಶಿಕ್ಷೆ ಇಲ್ಲ ಅಂದಂಗಾಯ್ತು?'

'ಇದೆ ಸರ್, ಆದರೆ ಅದು ಮನುಷ್ಯರ ಮನೋ ನ್ಯಾಯಾಲಯದಲ್ಲಿಯೇ ಆಗಬೇಕು'.

'ಹಾಗಾದರೆ ಅದು ಸಾಧ್ಯ ಇಲ್ಲ ಅನ್ಸುತ್ತೆ ಬಿಡಿ ಇನ್ಸ್‌ಪೆಕ್ಟರ್'.

'ಯಾಕೆ ಸರ್?'

'ಮನುಷ್ಯರು ಇನ್ನೂ ಅಷ್ಟು ವಿಕಾಸ ಹೊಂದಿಲ್ಲ ಸರ್'.

ಶರಣಾಗತ ಮತ್ತೇನೂ ಕೇಳದೇ ಅಲ್ಲಿಂದ ಹೊರಟ.

* * *

ಹೇಗೇಗೋ ಅಲ್ಲಿಲ್ಲಿ ಇಡೀ ದಿನ ಕಳೆದು ಮನೆಗೆ ಬಂದರೆ, ಅಲ್ಲಿ ಅದಾಗಲೇ ಹಾಜರಿದ್ದ ಪುಣ್ಯವಂತ ಆತನನ್ನು ನೋಡಿ, 'ಎಲ್ಲೋಗಿದ್ಯೋ ಬೆಳಗ್ಗಿಂದ? ಬಾ ಮನೆಗೆ ಹೋಗೋಣ. ಮುದ್ದೆ ಬಸ್ಸಾರು ಮಾಡಿದಾರೆ. ನಾನು ನಿನ್ಗೆ ಏನೋ ಹೇಳಬೇಕು' ಅಂತ ಕೈಹಿಡಿದು ಎಳೆದುಕೊಂಡು ಹೋದ. ಊಟದ ನಂತರ ಇಬ್ಬರೂ ಕೂತು ಮಾತನಾಡುವಾಗ ಪೊಲೀಸರು ಮನೆಗೆ ಬಂದ ವೃತ್ತಾಂತವನ್ನು ರಹಸ್ಯವಾಗಿ ಪುಣ್ಯವಂತ ಹೇಳುತ್ತಿದ್ದರೆ, ಈತನೊಬ್ಬ ನಿಷ್ಕ್ರಿಯ ಕೇಳುಗನಂತೆ ಕೂತಿದ್ದು, ಅವನ ದೃಷ್ಟಿ ಮಾತ್ರ ಶ್ರೀ ಪುಣ್ಯವಂತ ಶಿಕ್ಷಣ ಇಲಾಖೆ' ಎಂದು ಬದಲಾಗಿದ್ದ ಮನೆಯ ಮುಂದಿನ ನಾಮಫಲಕದ ಮೇಲೆ ನೆಟ್ಟಿತ್ತು.



ಪ್ರತಿಕ್ರಿಯಿಸಿ: **feedback@sudha.co.in**